5

# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 362 |
| ಸದಸ್ಯರ ಹೆಸರು | : | ಶ್ರೀ ಕೆ.ಟಿ. ಶ್ರೀಕಂಠೇಗೌಡ |
| ಉತ್ತರಿಸುವ ದಿನಾಂಕ | : | 18-02-2022 |
| ಉತ್ತರಿಸುವ ಸಚಿವರು | : | ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು. |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಸಮಾಜ ಕಲ್ಯಾಣ ಇಲಾಖೆಯ ವಸತಿ ಶಾಲೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಅತಿಥಿ ಶಿಕ್ಷಕರು ಎಷ್ಟು; ಇವರು ಎಷ್ಟು ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದಾರೆ; (ವಿವರ ನೀಡುವುದು) | ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವ್ಯಾಪ್ತಿಯಲ್ಲಿ 826 ವಸತಿ ಶಾಲೆ/ಕಾಲೇಜುಗಳು (ಪರಿಶಿಷ್ಟ ಜಾತಿ-503, ಪರಿಶಿಷ್ಟ ವರ್ಗ-146, ಹಿಂದುಳಿದ ವರ್ಗ-167) ಕಾರ್ಯನಿರ್ವಹಿಸುತ್ತಿವೆ.<br><br>ಸದರಿ ವಸತಿ ಶಾಲೆ/ಕಾಲೇಜುಗಳಲ್ಲಿ ಒಟ್ಟು 2213 ಅತಿಥಿ ಶಿಕ್ಷಕರು/ ಉಪನ್ಯಾಸಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಜಿಲ್ಲಾವಾರು ವಿವರವನ್ನು ಅನುಬಂಧ-1 ರಲ್ಲಿ ನೀಡಿದೆ.<br>ಜಿಲ್ಲಾ ಮಟ್ಟದ ಅಧಿಕಾರಿಗಳ ಮೂಲಕ ಅತಿಥಿ ಶಿಕ್ಷಕರು/ ಉಪನ್ಯಾಸಕರ ಹುದ್ದೆಗಳಿಗೆ ಪ್ರತಿ ವರ್ಷ ಅರ್ಜಿ ಆಹ್ವಾನಿಸಿ, ಅಭ್ಯರ್ಥಿಯ ವಿದ್ಯಾರ್ಹತೆ, ಅನುಭವ, ಬೋಧನಾ ಸಾಮರ್ಥ್ಯ ಮತ್ತು ವಿಧಾನ, ಸಂದರ್ಶನ ಮತ್ತಿತರ ಮಾನದಂಡಗಳ ಆಧಾರದ ಮೇಲೆ ಅರ್ಹ ಅತಿಥಿ ಶಿಕ್ಷಕರನ್ನು ಜಿಲ್ಲಾ ಹಂತದಲ್ಲಿ ಆಯ್ಕೆ ಮಾಡಿಕೊಳ್ಳಲಾಗುತ್ತಿದೆ. |
| ಆ) | ಇವರಿಗೆ ನೀಡುತ್ತಿರುವ ವೇತನ ಎಷ್ಟು; ವೇತನ ನೀಡುವುದು ಬಾಕಿ ಇದೆಯೇ;(ವಿವರ ನೀಡುವುದು) | ಸಂಘದ ಅಡಿಯಲ್ಲಿನ ವಸತಿ ಶಾಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅತಿಥಿ ಶಿಕ್ಷಕರಿಗೆ ಮಾಹೆಯಾನ ರೂ.10,000/- ಹಾಗೂ ವಸತಿ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರಿಗೆ ಮಾಹೆಯಾನ ರೂ.12,000/- ಗಳಂತೆ ವೇತನ ಪಾವತಿ ಮಾಡಲಾಗುತ್ತಿದೆ.<br>ಕರ್ತವ್ಯ ನಿರ್ವಹಿಸಿದ ಅವಧಿಗೆ ತಹಲ್ ವರೆಗೆ ವೇತನ ಪಾವತಿಸಿದೆ. |
| ಇ) | ವಸತಿ ಶಾಲೆಗಳಲ್ಲಿ ಸುದೀರ್ಘ ಸೇವೆ ಸಲ್ಲಿಸಿದ ಶಿಕ್ಷಕರನ್ನು ಖಾಯಂ ಮಾಡುವಂತೆ (2018ರಲ್ಲಿ) ಮಾನ್ಯ ಉಚ್ಚನ್ಯಾಯಾಲಯ ಆದೇಶ ಮಾಡಿರುವುದು ಸರ್ಕಾರದ ಗಮನಕ್ಕೆ | WP No: 12562-12564/2018, WP.No 46240/2018, WP No 45714-45716/2018, 52876/2018 & 1412-1546/2019ರ ಪ್ರಕರಣಗಳಿಗೆ ಸಂಬಂಧಿಸಿದಂತೆ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ಈ |

| | | |
|---|---|---|
| | ಬಂದಿದೆಯೇ; (ವಿವರ ನೀಡುವುದು) | ಕೆಳಕಂಡಂತೆ ಅಂತಿಮ ಆದೇಶವನ್ನು ನೀಡಿರುತ್ತದೆ. |
| ಈ) | ಹಲವಾರು ವರ್ಷಗಳಿಂದ ಕಡಿಮೆ ವೇತನಕ್ಕೆ ಕೆಲಸ ನಿರ್ವಹಿಸುತ್ತಿರುವ ಅತಿಥಿ ಶಿಕ್ಷಕರನ್ನು ನ್ಯಾಯಾಲಯದ ಆದೇಶದಂತೆ ಖಾಯಂಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? | "The third respondent is directed to consider the representation of the petitioners strictly in accordance with law. The writ petitions stand disposed off accordingly. The interim order granted earlier shall stand dissolved".<br>ಮಾನ್ಯ ನ್ಯಾಯಾಲಯದ ಆದೇಶದಂತೆ ಅತಿಥಿ ಶಿಕ್ಷಕರ ಮನವಿಗಳನ್ನು ಪರಿಶೀಲಿಸಿ, ಅತಿಥಿ ಶಿಕ್ಷಕರನ್ನು ಪೂರ್ಣ ಕಾಲಿಕ ಶಿಕ್ಷಕರನ್ನಾಗಿ ಖಾಯಂಗೊಳಿಸಲು ನಿಯಮಾನುಸಾರ ಅವಕಾಶವಿರುವುದಿಲ್ಲ ಎಂದು ಹಿಂಬರಹವನ್ನು ನೀಡಲಾಗಿರುತ್ತದೆ. ಆದ್ದರಿಂದ ಅತಿಥಿ ಶಿಕ್ಷಕರನ್ನು ಖಾಯಂಗೊಳಿಸಲು ನಿಯಮಾನುಸಾರ ಅವಕಾಶವಿರುವುದಿಲ್ಲ. |

ಸಂಖ್ಯೆ: ಸಕಇ 86 ಮೊದೇಶಾ 2022

(ಕೋಟ ಶ್ರೀನಿವಾಸ ಪೂಜಾರಿ)
ಸಮಾಜ ಕಲ್ಯಾಣ ಮತ್ತು
ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

## ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 51(362) ಕ್ಕೆ ಅನುಬಂಧ-1

### ಸಂಘದ ಅಧೀನದ ವಸತಿ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅತಿಥಿ ಶಿಕ್ಷಕರುಗಳ ಜಿಲ್ಲಾವಾರು ವಿವರಗಳು

| ಕ್ರಸಂ | ಜಿಲ್ಲೆ | ಮಂಜೂರಾತಿ ಸಂಖ್ಯೆ | ಖಾಯಂ ಸಿಬ್ಬಂದಿ | ಅತಿಥಿ ಸಿಬ್ಬಂದಿ | ಹೊರಸಂಪನ್ಮೂಲ ಸಿಬ್ಬಂದಿ | ಒಟ್ಟು |
|---|---|---|---|---|---|---|
| 1 | ಬೆಂಗಳೂರು ನಗರ ಜಿಲ್ಲೆ | 326 | 211 | 58 | 1 | 270 |
| 2 | ಬೆಂಗಳೂರು ಗ್ರಾಮಾಂತರ | 477 | 261 | 83 | 4 | 348 |
| 3 | ಚಿಕ್ಕಬಳ್ಳಾಪುರ | 595 | 401 | 87 | 8 | 496 |
| 4 | ಚಿತ್ರದುರ್ಗ | 134 | 79 | 30 | 10 | 119 |
| 5 | ದಾವಣಗೆರೆ | 52 | 42 | 8 | 12 | 62 |
| 6 | ಕೋಲಾರ | 319 | 158 | 94 | 5 | 257 |
| 7 | ರಾಮನಗರ | 232 | 92 | 65 | 28 | 185 |
| 8 | ಶಿವಮೊಗ್ಗ | 229 | 79 | 110 | 10 | 199 |
| 9 | ತುಮಕೂರು | 369 | 186 | 111 | 19 | 316 |
| 10 | ಚಾಮರಾಜನಗರ | 377 | 206 | 104 | 23 | 333 |
| 11 | ಚಿಕ್ಕಮಗಳೂರು | 118 | 62 | 6 | 5 | 73 |
| 12 | ದಕ್ಷಿಣ ಕನ್ನಡ | 240 | 158 | 60 | 4 | 222 |
| 13 | ಹಾಸನ | 167 | 113 | 30 | 7 | 150 |
| 14 | ಕೊಡಗು | 180 | 118 | 38 | 4 | 160 |
| 15 | ಮಂಡ್ಯ | 402 | 205 | 109 | 25 | 339 |
| 16 | ಮೈಸೂರು | 307 | 184 | 55 | 28 | 267 |
| 17 | ಉಡುಪಿ | 454 | 269 | 130 | 6 | 405 |
| 18 | ಬಾಗಲಕೋಟೆ | 104 | 39 | 42 | 13 | 94 |
| 19 | ವಿಜಯಪುರ | 267 | 95 | 107 | 15 | 217 |
| 20 | ಬೆಳಗಾವಿ | 312 | 188 | 99 | 19 | 306 |
| 21 | ಧಾರವಾಡ | 401 | 194 | 99 | 9 | 302 |
| 22 | ಗದಗ | 402 | 176 | 105 | 1 | 282 |
| 23 | ಹಾವೇರಿ | 379 | 202 | 124 | 12 | 338 |
| 24 | ಉತ್ತರ ಕನ್ನಡ | 246 | 108 | 59 | 17 | 184 |
| 25 | ಬಳ್ಳಾರಿ | 344 | 178 | 94 | 35 | 307 |
| 26 | ಬೀದರ್ | 578 | 238 | 158 | 42 | 438 |
| 27 | ಕಲಬುರಗಿ | 93 | 58 | 10 | 25 | 93 |
| 28 | ಕೊಪ್ಪಳ | 260 | 148 | 51 | 4 | 203 |
| 29 | ರಾಯಚೂರು | 242 | 171 | 30 | 16 | 217 |
| 30 | ಯಾದಗಿರಿ | 225 | 105 | 57 | 22 | 184 |
| ಒಟ್ಟು | | **8831** | **4724** | **2213** | **429** | **7366** |